ಕರ್ನಾಟಕ ವಿಧಾನಸಭೆ
ಹದಿನಾರನೇ ವಿಧಾನಸಭೆ
ಏಳನೇ ಅಧಿವೇಶನ

# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ-33)**

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2014 (2014ರ ಕರ್ನಾಟಕ ಅಧಿನಿಯಮ 32)ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2014 (2014ರ ಕರ್ನಾಟಕ ಅಧಿನಿಯಮ 32)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 12ರ ತಿದ್ದುಪಡಿ.-** ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2014 (2014ರ ಕರ್ನಾಟಕ ಅಧಿನಿಯಮ 32)ರ 12ನೇ ಪ್ರಕರಣದಲ್ಲಿ,-

(i) ಖಂಡ (2)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ರಸ್ತೆಗಳು, ಸೇತುವೆಗಳು, ಕೆರೆ ದಂಡೆಯ ಕೆಳಗೆ ನೀರು ಸರಬರಾಜು ಮಾರ್ಗಗಳು, ವಿದ್ಯುತ್ ಕಂಬಗಳಿಗೆ ಆಧಾರ ಪೀಠಗಳು, ಹೈ ಟೆನ್ಷನ್ ಗೋಪುರಗಳು, ಕೆರೆ ಭೂಮಿ ಅಥವಾ ಅದರ ಭಾಗವನ್ನೊಳಗೊಂಡು ಕೆರೆ ಪ್ರದೇಶದೊಳಗೆ ದಾರಿಗಳು ಮತ್ತು ಅದಕ್ಕೆ ಸಂಬಂಧಿತ ಕಾಮಗಾರಿಗಳು, ಕೆರೆಯಪೂರ್ಣ ಕೆರೆ ಮಟ್ಟ ಮತ್ತು ಗರಿಷ್ಟ ನೀರಿನ ಮಟ್ಟದ ನಡುವಿನಲ್ಲಿ ಜಾಕ್ ವೆಲ್ ಅಥವಾ ಪಂಪ್ ಹೌಸ್ ಅಥವಾ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸತಕ್ಕದ್ದಲ್ಲ:

ಪರಂತು ಈ ಖಂಡದಲ್ಲಿ ಇರುವುದಾವುದೂ, ಅಂಥ ಕಾಮಗಾರಿಗಳ ನಂತರವೂ ಕೆರೆಗಳ ಮೂಲ ಸಾಮರ್ಥ್ಯವು ಕಡಿಮೆಯಾಗದಿರುವುದನ್ನು ಅಥವಾ ಕೆರೆಗಳ ನೀರು ಹರಿವಿನ ವಿರುದ್ಧವಾಗಿ ಅಥವಾ ನೀರು ಹರಿವಿನ ಕಡೆಗೆ ಕೆರೆಗಳಿಂದ ಅಥವಾ ಕೆರೆಗಳಿಗೆ ನೀರಿನ ಒಳಹರಿವು ಅಥವಾ ಹೊರಹರಿವಿನ ಸ್ವಾಭಾವಿಕ ಅಥವಾ ಸಾಮಾನ್ಯ ಹರಿವಿಗೆ ಯಾವುದೇ ಅಡ್ಡಿಯುಂಟು ಮಾಡದಿರುವುದನ್ನು ಖಚಿತಪಡಿಸಿಕೊಂಡ ತರುವಾಯ ಮಾತ್ರವೇ ಪ್ರಾಧಿಕಾರವು ಅಂಥ ಕಾಮಗಾರಿಗಳಿಗಾಗಿ ಅನುಮತಿಯನ್ನು ಮಂಜೂರು ಮಾಡತಕ್ಕದ್ದು."

(ii) ಖಂಡ (3)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಪ್ರಾಧಿಕಾರದ ಪೂರ್ವಾನುಮೋದನೆಯೊಂದಿಗೆ, ಅಂಥ ಕಾಮಗಾರಿಗಳ ನಂತರವೂ ಕೆರೆಗಳ ನೀರು ಹರಿವಿನ ವಿರುದ್ಧವಾಗಿ ಅಥವಾ ನೀರು ಹರಿವಿನ ಕಡೆಗೆ ಕೆರೆಗಳಿಂದ ಅಥವಾ ಕೆರೆಗಳಿಗೆ ನೀರಿನ ಒಳಹರಿವು ಅಥವಾ ಹೊರಹರಿವಿನ ಸ್ವಾಭಾವಿಕ ಅಥವಾ ಸಾಮಾನ್ಯ ಹರಿವಿಗೆ ಯಾವುದೇ ಅಡ್ಡಿಯುಂಟು ಮಾಡದಿರುವಂತೆ, ಇತರ ಸಾರ್ವಜನಿಕ ಸೌಕರ್ಯ ಸೇವೆಗಳಾದ ರಸ್ತೆಗಳು, ಸೇತುವೆಗಳು, ವಿದ್ಯುತ್ ಮಾರ್ಗಗಳು, ನೀರು ಸರಬರಾಜು ಮಾರ್ಗಗಳು, ನೆಲದಡಿಯ ಚರಂಡಿ ಮಾರ್ಗ (UGD), ಜಾಕ್ ವೆಲ್ ಅಥವಾ ಪಂಪ್ ಹೌಸ್ ಕೊಳಚೆ ನೀರು ಸಂಸ್ಕರಣಾ ಘಟಕವನ್ನು (STP), ಮಧ್ಯಂತರ ಕೊಳಚೆ ನೀರು ಪಂಪಿಂಗ್ ಘಟಕ (ISPS), ಕೊಚ್ಚೆನೀರು ಗುಂಡಿ (wetwell), ಕಿರು ಜಲನಾಲೆ (aqueduct) ಇವುಗಳ ನಿರ್ಮಾಣವನ್ನು ಹೊರತುಪಡಿಸಿ, ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಕೆರೆಗಳ ಬಫರ್ ವಲಯದೊಳಗೆ ಯಾವುದೇ ಕಾಮಗಾರಿಯನ್ನು ಮಾಡತಕ್ಕದ್ದಲ್ಲ ಅಥವಾ ಯಾವುದೇ ವಾಣಿಜ್ಯ ಅಥವಾ ಮನರಂಜನೆ ಅಥವಾ ಕೈಗಾರಿಕಾ ಚಟುವಟಿಕೆಯನ್ನು ನಡೆಸತಕ್ಕದ್ದಲ್ಲ:

**ಕೋಷ್ಟಕ**

| ಕ್ರ.ಸಂ | ಕೆರೆಯ ವಿಸ್ತೀರ್ಣ ಎಕರೆ/ಗುಂಟೆಗಳಲ್ಲಿ | ಕೆರೆಯ ಕಂದಾಯ ಗಡಿಯಿಂದ ಬಫರ್ ವಲಯ ಮೀಟರುಗಳಲ್ಲಿ |
|---|---|---|
| 1 | 0.05 ರವರೆಗೆ | 0 |
| 2 | 0.05 ರಿಂದ ಮೇಲ್ಪಟ್ಟು 0.10 ರವರೆಗೆ | 1.00 |
| 3 | 0.10 ರಿಂದ ಮೇಲ್ಪಟ್ಟು 1.00 ರವರೆಗೆ | 3.00 |
| 4 | 1.00 ರಿಂದ ಮೇಲ್ಪಟ್ಟು 10.00 ರವರೆಗೆ | 6.00 |
| 5 | 10.00 ರಿಂದ ಮೇಲ್ಪಟ್ಟು 25.00 ರವರೆಗೆ | 12.00 |
| 6 | 25.00 ರಿಂದ ಮೇಲ್ಪಟ್ಟು 100.00 ರವರೆಗೆ | 24.00 |
| 7 | 100.00ಕ್ಕೆ ಮೇಲ್ಪಟ್ಟು | 30.00 |

(3ಎ) ಖಂಡ (3)ರಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ರಾಜ್ಯ ಜಲಮಾಲಿನ್ಯ ಪ್ರತಿಬಂಧಕ ಮತ್ತು ನಿಯಂತ್ರಣ ಮಂಡಳಿ (ಕಾರ್ಯಕಲಾಪ ನಿರ್ವಹಣಾ ಕಾರ್ಯವಿಧಾನ) ಮತ್ತು ನೀರು (ಮಾಲಿನ್ಯದ ಪ್ರತಿಬಂಧಕ ಮತ್ತು ನಿಯಂತ್ರಣ) ನಿಯಮಗಳು, 1976ರಲ್ಲಿ ನಿರ್ದಿಷ್ಟಪಡಿಸಿದ ಹೊಸ ಆರೋಗ್ಯನಿಗಾ ಸ್ಥಾಪನೆಗಳು ಮತ್ತು ಹೊಸ ಮೂಲಸೌಕರ್ಯ ಯೋಜನೆಗಳನ್ನು ಹೊರತುಪಡಿಸಿ ಹೊಸ ಕೈಗಾರಿಕೆಗಳಿಗಾಗಿ ನಿವೇಶನಾ ಮಾರ್ಗಸೂಚಿಗಳ ಕುರಿತಾದ ಉಪಬಂಧಗಳು ಚಾಲ್ತಿಯಲ್ಲಿರತಕ್ಕದ್ದು."

(iii) ಖಂಡ (6) ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಜಲ ಮೂಲಗಳಿಗೆ ಪ್ರದೇಶವಾರು ಬಫರ್‌ಜೋನನ್ನು ಪರಿಚಯಿಸಲು ಬಫರ್‌ಜೋನ್‌ನಲ್ಲಿ ರಸ್ತೆಗಳು, ಸೇತುವೆಗಳು, ವಿದ್ಯುತ್ ಮಾರ್ಗಗಳು, ನೀರು ಸರಬರಾಜು ಮಾರ್ಗಗಳು, ನೆಲದಡಿಯ ಚರಂಡಿ ಮಾರ್ಗ (UGD), ಜಾಕ್‌ವೆಲ್ ಅಥವಾ ಪಂಪ್‌ಹೌಸ್ ಅಥವಾ ಕೊಳಚೆ ನೀರು ಸಂಸ್ಕರಣಾ ಘಟಕವನ್ನು (STP), ಮಧ್ಯಂತರ ಕೊಳಚೆ ನೀರು ಪಂಪಿಂಗ್ ಘಟಕ (ISPS), ಕೊಚ್ಚೆನೀರು ಗುಂಡಿ (wetwell), ಕಿರು ಜಲನಾಲೆಯಂತಹ (aquaduct) ಮತ್ತು ಸಂಬಂಧಿತ ಕಾಮಗಾರಿಗಳನ್ನು ಪ್ರಾಧಿಕಾರದ ಪೂರ್ವಾನುಮೋದನೆಯೊಂದಿಗೆ ಕೆಲವು ಸಾರ್ವಜನಿಕ ಉಪಯುಕ್ತ ಚಟುವಟಿಕೆಗಳ ರಚನೆಗೆ ಅನುಮತಿ ನೀಡಲು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಿ ಅಧಿನಿಯಮ, 2014 (2014ರ ಕರ್ನಾಟಕ ಅಧಿನಿಯಮ 32)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎನ್. ಎಸ್. ಬೋಸರಾಜು**
ಸಣ್ಣ ನೀರಾವರಿ ಮತ್ತು ವಿಜ್ಞಾನ ಹಾಗೂ
ತಂತ್ರಜ್ಞಾನ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2014

## (2014ರ ಕರ್ನಾಟಕ ಅಧಿನಿಯಮ ಸಂಖ್ಯೆ 32) ಉದ್ಧೃತ ಭಾಗ

**XXX XXX XXX**

**12. ಕೆರೆಗಳಲ್ಲಿ ನಿಷೇಧಿಸಲಾದ ಚಟುವಟಿಕೆಗಳು.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಸಂಘಟನೆಯು (ನೋಂದಾಯಿತವಾದ ಅಥವಾ ನೋಂದಾಯಿತವಾಗಿಲ್ಲದ) ಅಥವಾ ಕಂಪನಿಯು ಅಥವಾ ಫರ್ಮು ಅಥವಾ ಸಂಘವು, ಸರ್ಕಾರಿ ಇಲಾಖೆಗಳು, ನಿಗಮ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮತ್ತು ಅವುಗಳ ಏಜೆಂಟರು ಅಥವಾ ನೌಕರರು ಅಥವಾ ಅವುಗಳ ಪರವಾಗಿ ಯಾವುದೇ ಸಂಸ್ಥೆಯು,-

(1) ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವಾ ಹಿಡಿದಿಟ್ಟುಕೊಳ್ಳುವುದಕ್ಕಾಗಿ ಅಥವಾ 5ನೇ ಪ್ರಕರಣದ (9)ನೇ ಖಂಡದಲ್ಲಿ ಹೇಳಿದ ಉದ್ದೇಶದ ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ;

(2) ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಪ್ರವಾಹದ ವಿರುದ್ಧವಾಗಿ ಮತ್ತು ಪ್ರವಾಹದ ಹರಿವಿನಲ್ಲಿರುವ ಕೆರೆಯಲ್ಲಿ ಅಥವಾ ಕೆರೆಯಿಂದ ನೀರು ಹರಿದು ಬರುತ್ತಿರುವ ಅಥವಾ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಅಥವಾ ಸಾಮಾನ್ಯವಾಗಿ ನೀರು ಹರಿಯುತ್ತಿರುವುದಕ್ಕೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ;

(3) ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳೊಳಗೆ ಯಾವುದೇ ವಾಣಿಜ್ಯ ಅಥವಾ ಮನರಂಜನೆ ಅಥವಾ ಕೈಗಾರಿಕಾ ಸಂಕೀರ್ಣಗಳನ್ನು ಕಟ್ಟತಕ್ಕದ್ದಲ್ಲ ಅಥವಾ ಯಾವುದೇ ಕೈಗಾರಿಕಾ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ.

(4) ವಾಹನವನ್ನು ಬಳಸಿ ಅಥವಾ ಇತರ ರೀತಿಯಲ್ಲಿ ಕೆರೆಯಲ್ಲಿ ಭಗ್ನಾವಶೇಷಗಳನ್ನು, ಪೌರ ಘನತ್ಯಾಜ್ಯಗಳನ್ನು, ಕೆಸರನ್ನು ಅಥವಾ ಮಣ್ಣನ್ನು ಅಥವಾ ದ್ರವ ತ್ಯಾಜ್ಯಗಳನ್ನು ಅಥವಾ ಯಾವುವೇ ಮಾಲಿನ್ಯಕಾರಕಗಳನ್ನು ರಾಶಿ ಹಾಕತಕ್ಕದ್ದಲ್ಲ;

(5) ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಕೆರೆಯಲ್ಲಿ ಸಂಸ್ಕರಿಸದಿರುವ ಚರಂಡಿ ನೀರನ್ನು ಹರಿಬಿಡತಕ್ಕದ್ದಲ್ಲ;

(6) ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ. ಪ್ರಾಧಿಕಾರವು, ಅಂಥ ಕಾಮಗಾರಿಯ ತರುವಾಯವೂ ಕೆರೆಗಳ ಮೂಲ ಸಾಮರ್ಥ್ಯವು ಕಡಿಮೆಯಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ತರುವಾಯ ಮಾತ್ರವೇ ಅಂಥ ಕಾಮಗಾರಿಗಳಿಗೆ ಅನುಮತಿಯನ್ನು ನೀಡಬಹುದು.

(7) ಒಡ್ಡನ್ನು, ನಿರುಪಯುಕ್ತ ತೂಬಿನ ಮೂಲ ಎತ್ತರವನ್ನು ಕಡಿಮೆ ಮಾಡುವುದು ಒಳಗೊಂಡಂತೆ ನಿರುಪಯುಕ್ತ ತೂಬನ್ನು ಒಡೆದುಹಾಕತಕ್ಕದ್ದಲ್ಲ ಅಥವಾ ಬೇಲಿಯನ್ನು, ಗಡಿಗುರುತು ಕಲ್ಲುಗಳನ್ನು ತೆಗೆದುಹಾಕತಕ್ಕದ್ದಲ್ಲ ಅಥವಾ ಪ್ರಾಧಿಕಾರವು ನಿರ್ಮಿಸಿದ ಭಿತ್ತಿಪತ್ರಗಳನ್ನು ಅಥವಾ ಯಾವುದೇ ಸೂಚನಾ ಫಲಕಗಳನ್ನು ತೆಗೆದು ಹಾಕತಕ್ಕದ್ದಲ್ಲ; ಮತ್ತು

(8) ಕೆರೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಬಾಧಕವಾದ ಯಾವುದೇ ಕೃತ್ಯವನ್ನು ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದು, ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಕೆರೆಯಿಂದ ಕುಡಿಯುವುದಕ್ಕಾಗಿ ಅಥವಾ ನೀರಾವರಿಗಾಗಿ ಅಥವಾ ಮಾನವ ಬಳಕೆಗಾಗಿನ ಯಾವುದೇ ಉದ್ದೇಶಕ್ಕಾಗಿ ನೀರನ್ನು ತೆಗೆದುಕೊಳ್ಳುವುದನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತು ಪರಂತು, ಈ ಅಧಿನಿಯಮದಲ್ಲಿರುವುದಾವುದೂ, ಸರ್ಕಾರವು ಮತ್ತು ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಕೆರೆಯಲ್ಲಿ ಅದರ ಲೈಸನ್ಸ್ದಾರನು, ಗೇಣಿದಾರನು ಅಥವಾ ಗುತ್ತಿಗೆದಾರನು (ಕೆರೆಯ ಜಲ ಜೀವ ಪರಿಸರ ವ್ಯವಸ್ಥೆಗೆ ಅಪಾಯಕಾರಿಯಾದ ಅಥವಾ ಉಪದ್ರವಕಾರಿಯಾದ ಮೀನಿನ ಹೊರತಾಗಿ) ಮೀನು ಮರಿಗಳ ಸಂಗ್ರಹಣೆಯನ್ನು ಮತ್ತು ಮೀನುಗಾರಿಕೆ ಅಭಿವೃದ್ಧಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500+100, 5ನೇ ಆಗಸ್ಟ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SEVENTH SESSION**

# THE KARNATAKA TANK CONSERVATION AND DEVELOPMENT AUTHORITY (AMENDMENT) BILL, 2025

**(LA Bill No. 33 of 2025)**

A Bill further to amend the Karnataka Tank Conservation and Development Authority Act, 2014 (Karnataka Act 32 of 2014);

Whereas it is expedient further to amend the Karnataka Tank Conservation and Development Authority Act, 2014 (Karnataka Act 32 of 2014) for the purposes hereinafter appearing;

Be it enacted by the Karnataka State Legislature in the Seventy-sixth year of the Republic of India as follows:-

**1. Short title and commencement.-** (1) This Act may be called the Karnataka Tank Conservation and Development Authority (Amendment) Act, 2025.

(2) It shall come into force at once.

**2. Amendment of section 12.-** In the Karnataka Tank Conservation and Development Authority Act, 2014 (Karnataka Act 32 of 2014) in section 12,-

(i) for clause (2), the following shall be substituted, namely:-

"(2) Construct roads, bridges, water supply lines in Below Tank bed, Pedestrian to Electrical poles, High tension tower, Approaches and allied works within tank area including the tank land or part thereof, Jack well or pump house or Sewage Treatment Plant in between Full Tank Level and Maximum Water Level of the Tank:

Provided that, nothing in this clause the Authority shall grant permission for such works only after ensuring that the original capacity of the tanks is not reduced or cause any obstruction at the natural or normal course of inflow or outflow of water into, or from, the tanks on the upstream and or downstream even after such works."

(ii) for clause (3), the following shall be substituted, namely:-

"(3) make any construction or carry on any commercial or recreational or industrial activity within the Buffer zone of the tanks specified in the table below except other public utility services like construction of roads, bridges, electrical line, water supply line, Under Ground Drainage (UGD) line, Jack well or pump house or Sewage Treatment Plant (STP), Intermediate Sewage Pumping Station (ISPS), Wetwell, Aquaduct and allied works with prior approval of the Authority, without any obstruction at the natural or normal course of inflow or outflow of water into, or from, the tanks on the upstream and or downstream even after said works:

**TABLE**

| Sl. No. | Area of tank in acre/gunta | Buffer from revenue boundary of the tank in meters |
|---|---|---|
| 1 | upto 0.05 | 0 |
| 2 | Above 0.05 to 0.10 | 1.00 |
| 3 | Above 0.10 to 1.00 | 3.00 |
| 4 | Above 1.00 to 10.00 | 6.00 |
| 5 | Above 10.00 to 25.00 | 12.00 |
| 6 | Above 25.00 to 100.00 | 24.00 |
| 7 | Above 100.00 | 30.00 |

(3-A) Notwithstanding anything contained in clause (3) the provisions regarding Siting Guidelines for new industries excluding new healthcare establishments and new infrastructure projects specified in the Karnataka State Board for the Prevention and Control of Water Pollution (Procedure for Transaction of Business) and the Water (Prevention and Control of Pollution) Rules, 1976 shall prevail."

(iii) clause (6) and the entries relating thereto, shall be omitted.

## STATEMENT OF OBJECTS AND REASONS

It is considered necessary to amend the Karnataka Tank Conservation and Development Authority Act, 2014 (Karnataka Act 32 of 2014), to introduce area-wise buffer zones for water bodies and permit construction of certain public utility activities such as roads, bridges, electrical line, water supply line, Under Ground Drainage (UGD) line, Jack well or pump house or Sewage Treatment Plant (STP), Intermediate Sewage Pumping Station (ISPS), Wetwell, Aquaduct and allied works with prior approval of the Authority.

Hence, the Bill.

## FINANCIAL MEMORANDUM

There is no extra expenditure involved in the proposed legislative measures.

**N.S. BOSERAJU**
Minister for Minor Irrigation and
Science and Technology

**M.K. VISHALAKSHI**
Secretary
Karnataka Legislative Assembly

# ANNEXURE

## THE KARNATAKA TANK CONSERVATION AND DEVELOPMENT AUTHORITY ACT, 2014

## KARNATAKA ACT NO 32 OF 2014

XXX XXX XXX

**12. Acts Prohibited in Tanks.-** Notwithstanding anything to the contrary contained in any law for the time being in force, no person or institution or organization (registered or unregistered) or company or firm or association, government departments, corporation or any local or other authority and their agents or employees or any body on their behalf shall,-

(1) use the tank for any purpose other than storage or impounding of water or for the purpose mentioned in clause (9) of section 5;

(2) construct any structure on tank land, occupy any tank land or part there of or cause any obstruction at the natural or normal course of inflow or outflow of water into, or from, the tanks on the upstream and or downstream;

(3) make any construction or carry on any commercial or recreational or industrial activity within thirty meters from the outer boundary of the tanks.

(4) dump debris, municipal solid wastes, mud or earth soil or liquid wastes or any pollutants, into the tank by using vehicle or otherwise;

(5) discharge untreated sewage into the tank directly or indirectly;

(6) construct roads, bridges and allied works within tank area including the tank bund. the authority may grant permission for such works only after ensuring that the original capacity of the tanks is not reduced even after such work".

(7) breach bund, waste weir including lowering raising the height of the waste weir from its original height or remove fence, boundary stones or any hoarding or any sign board erected by the authority; and

(8) do any other act which is detrimental directly or indirectly to the tanks.

Provided that nothing in this act shall prohibit withdrawal of water for drinking or irrigation or any other purpose, for human consumption from any tank be specified by the authority from time to time.

Provided further that nothing in this act shall prohibit stocking of fish seeds and development of fisheries (except the fish which are dangerous or harmful to the aquatic eco-system of the tank) by the government and its licensee, lessees or contractor in any tank specified by the authority from time to time.

**XXX** **XXX** **XXX**

Govt. Press, Vikasa Soudha, Bengalur, 05th August, 2025, P7, W.D. , Copies 500+100